# ಗೀಚು ಬರಹ

■ ರವಿರಾಜ ಬೈಕಂಪಾಡಿ
ಕಲೆ: ಈಶ್ವರ ಬಡಿಗೇರ

ತ್ರಿಲ್ಲಾ ಕ್ಷುಲ್ಲಕವೆಂಬಂತೆ ಕಂಡರೂ, ಅಂತ್ಯದಲ್ಲಿ ಭಾರೀ ರಹಸ್ಯವೊಂದನ್ನು ಅನಾವರಣಗೊಳಿಸಿದ ವಿಚಿತ್ರವಾದ ಘಟನೆ ಗೀಚು ಬರಹದ ಪ್ರಕರಣ. ಅದು ನಡೆದದ್ದು ನಾನು ಕರಮಚಂದನಲ್ಲಿ ವಕೀಲಗಿರಿಗೆ ಸೇರಿದ ಮಾರನೆಯ ವರ್ಷ.

ಬೆಳ್ಳಂಬೆಳಗ್ಗೆ ವಿರಾಜಪೇಟೆಯ ವೃತ್ತ ನಿರೀಕ್ಷಕ ಡಿಸೋಜನ ಕರೆ ಬಂದಾಗ, ನಾವು ಠಾಣೆಯತ್ತ ಧಾವಿಸಿದೆವು. ವ್ಯಕ್ತಿಯೊಬ್ಬನನ್ನು ಸೆಲ್‌ನೊಳಗೆ ಕೂಡಿ ಹಾಕಿ, ತನ್ನೆದುರಿಗಿದ್ದ ಕಾಗದದ ತುಂಡೊಂದನ್ನು ದಿಟ್ಟಿಸುತ್ತಿದ್ದ ಡಿಸೋಜ ನಗು ಬೀರಿ, ನಮ್ಮತ್ತ ಆ ಕಾಗದವನ್ನು ತಳ್ಳಿದ.

ಅದರಲ್ಲಿದ್ದದ್ದು ಇಷ್ಟೇ... 16–3/41, ದೇವಸ್ಥಾನದ ಸೈಡಿದ್ದು! ಯಾರೋ ಅವಸರದಲ್ಲಿ ಗೀಚಿದ ವಕ್ರವಾದ ಬರಹ!!

"ಇದೆಲ್ಲಿ ಸಿಕ್ಕಿತು?"

ಉತ್ತರವಾಗಿ ಸೆಲ್‌ನೊಳಗಿದ್ದ ವ್ಯಕ್ತಿಯನ್ನು ತೋರಿದ ಡಿಸೋಜ ಹೇಳಿದ,

"ಅವ್ನ ಪರ್ಸಿನಲ್ಲಿ ಸಿಕ್ಕಿದ್ದು. ಅವ್ನು ಜೋಯಪ್ಪ. ನಿನ್ನೆ ರಾತ್ರಿ ಬಾರೊಂದರಲ್ಲಿ ಕುಡಿದು ಗಲಾಟೆ ಮಾಡಿದ್ದಕ್ಕೆ ಎತ್ತಿಕೊಂಡು ಬಂದೆವು. ಇದೇನೆಂದು ಕೇಳಿದರೆ, ತನಗೆ ನೆನಪಿಲ್ಲ ಅಂತಾನೆ."

"ನಿಜವಾಗ್ಲೂ ನೆನಪಿಲ್ಲ, ಸಾರ್" ಗಟ್ಟಿಯಾಗಿ ಹೇಳಿ, ಜೋಯಪ್ಪ ನಕ್ಕಾಗ, ಪಾನ್ ಬೀಡ ಜಗಿದು ಕೆಂಪಾದ ಆತನ ಹಲ್ಲುಗಳು ಮಿನುಗಿದವು!

ಕರಮಚಂದ ಪರ್ಸನ್ನು ಅತ್ತಿತ್ತ ಹೊರಳಿಸಿ, ಒಮ್ಮೆ ಅದನ್ನು ಮೂಸಿ, ಪರಿಶೀಲಿಸಿದವನು ಚಕ್ಕನೆ ಎದ್ದು ಜೋಯಪ್ಪನತ್ತ ನಡೆದು, ದೀರ್ಘವಾಗಿ ಉಸಿರೆಳೆದು, ಉದ್ಗರಿಸಿದ,

"ಜೋಯಪ್ಪ, ಇದನ್ನ ಎಲ್ಲಿಂದ ಪಿಕ್ ಪಾಕೆಟ್ ಮಾಡಿದ್ದು?"

ಕರಮಚಂದನ ಪ್ರಶ್ನೆಗೆ ಜೋಯಪ್ಪ ತೊದಲುತ್ತಾ ಬಡಬಡಿಸಿದ,

"ಬಸ್ ಸ್ಟ್ಯಾಂಡಿನಲ್ಲಿ!"

ಡಿಸೋಜ ಅಚ್ಚರಿಯಲ್ಲಿ ಹುಬ್ಬೇರಿಸಿದ.

"ಸದಾ ಪಾನ್ ಜಗಿಯುವ ವ್ಯಕ್ತಿಯ ಪರ್ಸಿನಲ್ಲಿ ಪಾನ್ ಕಲೆ ಇರಲೇಬೇಕು! ಈ ಪರ್ಸಿನಲ್ಲಿ ಅದಿಲ್ಲ. ಮತ್ತೆ, ಈ ಪರ್ಸಿನ ಸುಗಂಧ! ಡೆನಿಮ್ ಮಾದರಿಯ ಸೆಂಟ್! ಆದರೆ ಜೋಯಪ್ಪನಲ್ಲಿ ಉಡುಪಿನಲ್ಲಿ ಅದರ ಸುಳಿವೇ ಇಲ್ಲ. ಹೇಗೆ ಸಾಧ್ಯ?" – ಕದ್ದದ್ದು ಎನ್ನಲು ಕರಮಚಂದನ ತರ್ಕ.

"ಹಾಗಿದ್ದರೆ ಈ ಬರಹದ ಅರ್ಥವೇನು? ಇದಕ್ಕೇನಾದರೂ ಮಹತ್ವವಿದೆಯೇ?" – ನನ್ನ ಅನುಮಾನ.

"ಇದೊಂದು ಮಾಮೂಲಿ ಪಿಕ್ ಪಾಕೆಟ್ ಪ್ರಕರಣ. ಪರ್ಸಿನಲ್ಲಿದ್ದ ಯಾವುದೋ ಬರಹಕ್ಕೆ ಯಾಕೆ ಮಹತ್ವ ಕೊಡಬೇಕು?" ಡಿಸೋಜನಿಗೀಗ ಆಸಕ್ತಿಯಿರಲಿಲ್ಲ.

"ನಾವು ಆ ಜಾಗವನ್ನು ನೋಡಲೇಬೇಕು. ಈ ಬರಹದಲ್ಲಿ ಒಂದು ಅಸಹಜತೆ ಇದೆ. ದೇವಸ್ಥಾನದ ಸೈಡಿದ್ದು ಅಂತೇಕೆ ಬರೆದಿದೆ? ಒಂದಕ್ಕಿಂತ ಹೆಚ್ಚಿದ್ದಾಗ ಹಾಗೆ ಬರೆಯುವುದು ಸಹಜ. ಆ ಸಂಖ್ಯೆಯ ಎರಡು ಮನೆಗಳಿವೆಯೇ?" ಕರಮಚಂದನ ವಾದ.

"ಹಾಗೆಯೇ ಆಗಬೇಕೆಂದೇನಿಲ್ಲ. ಸುಲಭವಾಗಿ ಗುರುತಿಸಲು, ದೇವಸ್ಥಾನದ ಸೈಡಿನ ಮನೆ ಅಂದಿರಬಹುದಲ್ವೇ?"

"ಆ ಸಾಧ್ಯತೆ ಇಲ್ಲವೆನ್ನುತ್ತಿಲ್ಲ. ಅಲ್ಲಿಗೆ ಭೇಟಿ ನೀಡಿದರೆ ಎಲ್ಲ ಸ್ಪಷ್ಟವಾಗುತ್ತೆ. ಡಿಸೋಜ, ಆ ಮನೆಯ ಮಾಲಿಕ ಯಾರೆಂದು ನೋಡಿ."

ಡಿಸೋಜ ನಗರಪಾಲಿಕೆಯ ಬಡಾವಣೆಗಳ ವಿವರಗಳಿರುವ ಗ್ರಂಥವನ್ನು ತೆರೆದು, ಪುಟ ತಿರುವಿ, ಉಸುರಿದ,

"ಅದು ನಿಸರ್ಗ ಲೇಔಟಿನಲ್ಲಿರುವ ಮನೆ. ಅದರ ಮಾಲಿಕ ಕಾಂಡೇರ ಶಮಿ. ಹತ್ತಿರದಲ್ಲಿ ಇಗ್ಗುತ್ತಪ್ಪನ ಗುಡಿಯಿದೆ."

"ಓ. ಕೆ., ನಾವಲ್ಲಿಗೆ ಹೋಗುವ."

* * *

ಇಗ್ಗುತ್ತಪ್ಪ ಗುಡಿಯ ಪಕ್ಕದಲ್ಲಿದ್ದ ಮನೆಯನ್ನು

